ಕರ್ನಾಟಕ ಸರ್ಕಾರ
GOVERNMENT OF KARNATAKA
ಜಿಲ್ಲಾ ಪಂಚಾಯತ ಕಾರ್ಯಾಲಯ ಬೆಳಗಾವಿ-590 002
ZILLA PANCHAYAT OFFICE, BELGAUM-590 002

ದೂರವಾಣಿ 0831-2407205
Telephone -2407212

ಫ್ಯಾಕ್ಸ್/Fax 0831-2429662
e-mail ceo_zp_bgm@nic.in
eobelmms@yahoo.co.in

ಸಂಖ್ಯೆ:ಜಿಪಂ:ಅದಾ:ಸುರಕ್ಷತೆ:2013-14

ದಿನಾಂಕ: 19-9-2013.

# ಜ್ಞಾಪನ

ವಿಷಯ: ಊಟ ನೀಡುವಾಗಿ ಬಿಸಿಸಾಂಬಾರು ಪಾತ್ರೆಯಲ್ಲಿ ಮಗು ಬಿದ್ದು ಸಾವನ್ನಪ್ಪಿರುವ ಕುರಿತು.
ಉಲ್ಲೇಖ: ಮಾನ್ಯ ಆಯುಕ್ತರು, ಸಾ.ಶಿ.ಇಲಾಖೆ, ಬೆಂಗಳೂರು ರವರ ಜ್ಞಾಪನ
ಸಂಖ್ಯೆ:ಎಂ2:ಅದಾ:ಸುರಕ್ಷತೆ07/2013-14 ದಿನಾಂಕ: 18-09-2013.

**

ಮೇಲ್ಕಂಡ ವಿಷಯ ಮತ್ತು ಉಲ್ಲೇಖಕ್ಕೆ ಸಂಬಂಧಿಸಿದಂತೆ ಮಧ್ಯಾಹ್ನ ಉಪಹಾರ ಯೋಜನೆ ಕಾರ್ಯಕ್ರಮವು ಕರ್ನಾಟಕ ಸರ್ಕಾರದ ಮಹತ್ವಾಕಾಂಕ್ಷೆಯ ಕಾರ್ಯಕ್ರಮ, ಕಾರ್ಯಕ್ರಮದ ಯಶಸ್ವಿ ನಿರ್ವಹಣೆಗಾಗಿ ಮಕ್ಕಳ ಸುರಕ್ಷತೆ ಹಾಗೂ ಯೋಜನೆಯ ಅನುಷ್ಠಾನಕ್ಕಾಗಿ ಇಲಾಖೆಯಿಂದ ಅನೇಕ ಸುತ್ತೋಲೆಗಳನ್ನು ಸುರಕ್ಷತೆಯ ಬಗ್ಗೆ ಮಾರ್ಗಸೂಚಿ ಪುಸ್ತಕವನ್ನು ಸಹ ನೀಡಿ ಅನುಸರಿಸಲು ತಿಳಿಸಲಾಗಿದೆ. ಈ ಬಗ್ಗೆ ಸಾಕಷ್ಟು ಬಾರಿ ಈ ಕಛೇರಿಯಿಂದ ಸುತ್ತೋಲೆಗಳನ್ನು ಸುರಕ್ಷತೆ ಕ್ರಮಗಳನ್ನು ಕೈಗೊಳ್ಳಲು ತಿಳಿಸಿದ್ದರೂ ಸಹ ಅಹಿತಕರ ಘಟನೆಗಳು ಮರುಕಳಿಸುತ್ತಿರುವುದು ವಿಷಾದನೀಯ.

**ಈ ಘಟನೆಗೆ ಕಾರಣವನ್ನು ಪರಿಶೀಲಿಸಿದಾಗ ಕಂಡು ಬಂದಿರುವ ಪ್ರಮುಖ ಅಂಶಗಳೆಂದರೆ**

- ಅಡುಗೆ ತಯಾರಿಸಿ, ಅನ್ನ ಮತ್ತು ಸಾಂಬಾರಿನ ದೊಡ್ಡ ಪಾತ್ರೆಗಳನ್ನು ಅಡುಗೆ ಮನೆಯಿಂದ ಹೊರಗಡೆ ಇಟ್ಟುಕೊಂಡು, ಅವುಗಳ ಮುಂದೆಯೇ ಮಕ್ಕಳು ಬಂದು ಪಡೆಯುತ್ತಿರುವುದು
- ಹೀಗೆ ಸಾಲುಗಳಲ್ಲಿ ಊಟ ನೀಡುವಾಗ ಮಕ್ಕಳು ಸರಿಯಾಗಿ ಪಾತ್ರೆಗಳಿಂದ ದೂರದಲ್ಲಿ ಶಿಸ್ತಾಗಿ ನಿಂತು ನಿಧಾನವಾಗಿ ಊಟ ಪಡೆಯಲು ತರಗತಿ ಶಿಕ್ಷಕರು ಉಸ್ತುವಾರಿ ಮಾಡದೇ ಇರುವುದು
- ಬಿಸಿ ಪಾತ್ರೆಗಳ ಹತ್ತಿರಕ್ಕೆ ಚಿಕ್ಕ ಮಕ್ಕಳು ಬಾರದಂತೆ ತಡೆಯಲು ಮಕ್ಕಳು ಮತ್ತು ಪಾತ್ರೆಗಳ ಮಧ್ಯೆ ಯಾವುದಾದರೂ ತಡೆ (ಬೆಂಚು, ಟೇಬಲ್) ಇಟ್ಟುಕೊಳ್ಳದೆ ಇರುವುದು ಕಾರಣವಾಗಿರುವುದು ಕಂಡುಬರುತ್ತದೆ.

ಈ ಬಗ್ಗೆ ಈಗಾಗಲೇ ಮಧ್ಯಾಹ್ನದ ಉಪಹಾರ ಯೋಜನೆ ಪ್ರಾರಂಭದಿಂದಲೂ ಈ ಬಗ್ಗೆ ಅನೇಕ ಸೂಚನೆಗಳನ್ನು ನೀಡಲಾಗಿದೆ. ಮುಖ್ಯಶಿಕ್ಷಕರು ಶಾಲೆಗಳಲ್ಲಿ ಎಚ್ಚರಿಕೆ ಕ್ರಮ ಅನುಸರಿಸಲು ಸೂಚಿಸಲಾಗಿದೆ. ಹೀಗಿದ್ದು, ಮುಖ್ಯಶಿಕ್ಷಕರು ಈ ಸೂಚನೆಗಳನ್ನು ಅನುಸರಿಸುವಲ್ಲಿ, ತರಗತಿ ಶಿಕ್ಷಕರಿಗೆ ಹಾಗೂ ಅಡುಗೆಯವರಿಗೆ ಸೂಕ್ತ ನಿರ್ದೇಶನ ನೀಡುವಲ್ಲಿ, ಅವರಿಗೆ ಜವಾಬ್ದಾರಿ ವಹಿಸುವಲ್ಲಿ, ಜವಾಬ್ದಾರಿ ನಿರ್ವಹಿಸದ ಅಡುಗೆ ಹಾಗೂ ಶಿಕ್ಷಕರ ಮೇಲೆ ಸೂಕ್ತ ಕ್ರಮ ಅನುಸರಿಸುವಲ್ಲಿ ವಿಫಲರಾಗಿರುತ್ತಾರೆ. ಹಾಗಾಗಿ ಈ ಎರಡು ಶಾಲೆಗಳಲ್ಲಿ ಇಂತಹ ದುರ್ಘಟನೆ ನಡೆಯಲು ಕಾರಣವಾಗಿರುತ್ತದೆ. ಈ ಹಿಂದೆ ಇಲಾಖೆ ನೀಡಿರುವ ಎಲ್ಲಾ ಸೂಚನೆಯನ್ನು ಅನುಷ್ಠಾನ ಮಾಡುವುದರ ಜೊತೆಯಲ್ಲಿ ಈ ಕೆಳಕಂಡ ಸೂಚನೆಗಳನ್ನು ಕಡ್ಡಾಯವಾಘಿ ಪಾಲನೆ ಮಾಡಲು ಸೂಚಿಸಿದೆ.

- ಪ್ರತಿ ದಿನ ಅಡುಗೆ ಮನೆಯಲ್ಲಿ ಊಟ ತಯಾರಿಸಿದ ನಂತರ ಬಿಸಿಯಾದ ಅನ್ನ ಮತ್ತು ಸಾಂಬಾರು ಪಾತ್ರೆಗಳನ್ನು ಹೊರಗೆ ತರದೇ ಅಡುಗೆ ಕೋಣೆಯಲ್ಲಿಯೇ ಭದ್ರವಾಗಿ ಮುಚ್ಚಳ ಮುಚ್ಚಿ ಇಟ್ಟಿರುವುದು
- ಅಡುಗೆಯನ್ನು ಮಕ್ಕಳಿಗೆ ಊಟ ಬಡಿಸುವ ಅರ್ಧ ಗಂಟೆ ಮುಂಚಿತವಾಗಿ ತಯಾರಿಸಿ ದೊಡ್ಡ ಪಾತ್ರೆಗಳಿಂದ ಚಿಕ್ಕ ಪಾತ್ರೆಗಳಿಗೆ ಬದಲಯಿಸಿಕೊಂಡು ಒಂದನೇ ತರಗತಿ ಮಕ್ಕಳೂ ಸಹ ಸರಾಗವಾಗಿ ಊಟ ಮಾಡಲು ಸಾಧ್ಯವಾಗುವಷ್ಟು ಬಿಸಿ ಇರುವಂತೆ ನೋಡಿಕೊಂಡು ಬಡಿಸತಕ್ಕದ್ದು.
- ಅಡುಗೆ ಕೋಣೆಯ ಒಳಗೆ ಯಾವ ಮಕ್ಕಳು ಯಾವುದೇ ಕಾರಣಕ್ಕೂ ಹೋಗದಂತೆ ನಿಷೇಧಿಸುವುದು. ಅಡುಗೆಯವರು ಯಾವುದೇ ಕಾರಣಕ್ಕೂ ದೊಡ್ಡ ಪಾತ್ರೆಗಳಲ್ಲಿ ತುಂಬಿಕೊಂಡು ಊಟ ಬಡಿಸದೇ ಚಿಕ್ಕ ಚಿಕ್ಕ ಬಕೆಟ್‌ಗಳಲ್ಲಿಯೇ ಅನ್ನ ಮತ್ತು ಸಾಂಬಾರು ತುಂಬಿಕೊಂಡು ಮಕ್ಕಳಿಗೆ ಊಟ ಬಡಿಸುವುದು
- ಕಡ್ಡಾಯವಾಗಿ ಶಾಲಾ ಕಾರಿಡಾರ್‌ನಲ್ಲಿಯೇ ಅಥವಾ ತರಗತಿ ಕೋಣೆಯೊಳಗೆ ಮಕ್ಕಳು ಕುಳಿತು ಊಟ ಮಾಡಲು ಅಗತ್ಯ ಕ್ರಮಕೊಗಳ್ಳುವುದು
- ಯಾವುದೇ ಕಾರಣಕ್ಕೂ ಮಕ್ಕಳು ಪಾತ್ರೆ ಮುಂದೆ ನಿಂತು ಊಟವನ್ನು ತಟ್ಟೆಗೆ ಹಾಕಿಸಿಕೊಳ್ಳುವುದನ್ನು ನಿಷೇಧಿಸಿದೆ. ಕಾರಿಡಾರ್ ಅಥವಾ ಶಾಲಾ ಕೋಣೆಗಳ ಒಳಗಡೆಯೇ ಊಟ ಬಡಿಸಬೇಕು. ಮಕ್ಕಳು ಕುಳಿತು ಊಟ ಮಾಡಬೇಕು.
- ಹೆಚ್ಚು ಮಕ್ಕಳು ಇದ್ದಲ್ಲಿ ಸರದಿ ಪ್ರಕಾರ ಊಟ ನೀಡುವುದು
- ಊಟದ ಬೆಲ್ ಆದ ತಕ್ಷಣ ಆಯಾ ತರಗತಿಯ ಶಿಕ್ಷಕರು ಅವರವರ ತರಗತಿ ಕೋಣೆಯೊಳಗೆ ಧಾವಿಸಿ ಮುಂದೆ ನಿಂತು ಮಕ್ಕಳು ತರಗತಿ ಕೋಣೆಯಿಂದ ಹೊರಟು ಹೊರಗಡೆ ಊಟದ ಕಾರಿಡಾರ್‌ವರೆಗೆ ಬಂದು ಕ್ರಮವಾಗಿ ಕುಳಿತುಕೊಂಡು ಊಟವನ್ನು ಪಡೆದು ಊಟ ಮಾಡಿ ಮತ್ತೆ ಕೈ, ತಟ್ಟೆ ತೊಳೆದುಕೊಂಡು

ಶಿಕ್ಷಕರಿಗೆ ಮುಖ್ಯಶಿಕ್ಷಕರು ಸೂಕ್ತ ಆದೇಶವನ್ನು ಮೆಮೊ ಮೂಲಕ ನೀಡಲು ಸೂಚಿಸಿದೆ. ತರಗತಿ ಶಿಕ್ಷಕರು ರಜೆ ಇದ್ದಾಗ ಈ ಉಸ್ತುವಾರಿ ಕೆಲಸವನ್ನು ಬೇರೆ ಶಿಕ್ಷಕರಿಗೆ ತಪ್ಪದೇ ಬೆಳಗಿನ ಅವಧಿಯಲ್ಲಿಯೇ ಮುಖ್ಯಶಿಕ್ಷಕರು ಮೆಮೊ ಮೂಲಕ ಆದೇಶ ನೀಡಬೇಕು.

- ಯಾವುದೇ ಕೆಲಸವಿದ್ದರೂ ಅದನ್ನು ಬಿಟ್ಟು ಮುಖ್ಯಶಿಕ್ಷಕರು ಹಾಗೂ ತರಗತಿ ಶಿಕ್ಷಕರು/ ದೈಹಿಕ ಶಿಕ್ಷಕರು/ ಊಟದ ವೇಳೆಯಲ್ಲಿ ಕಡ್ಡಾಯವಾಗಿ ಊಟದ ವಿತರಣೆಯ ಉಸ್ತುವಾರಿ ವಹಿಸಿ, ಯಾವುದೇ ಸಮಸ್ಯೆ ಇಲ್ಲದಂತೆ ಮಕ್ಕಳು ಊಟ ಪಡೆಯುವಂತೆ ಕ್ರಮವಹಿಸಬೇಕು.
- ಊಟದ ವೇಳೆಯಲ್ಲಿ ಎಲ್ಲಾ ಶಿಕ್ಷಕರು ಹಾಗೂ ಅಡುಗೆಯವರು ಕಡ್ಡಾಯವಾಗಿ ಹಾಜರಿದ್ದು, ಮುಂದೆ ನಿಂತು ಊಟದ ಉಸ್ತುವಾರಿ ನಿರ್ವಹಿಸುವುದನ್ನು ಕಡ್ಡಾಯಗೊಳಿಸಲಾಗಿದೆ.
- ಕುಡಿಯುವ ನೀರು, ಆಹಾರ ಪದಾರ್ಥಗಳ ಸ್ವಚ್ಛತೆ, ಗುಣಮಟ್ಟ ಪರಿಶೀಲನೆ, ಅಡುಗೆ ಮನೆ ಸ್ವಚ್ಛತೆ ಬಗ್ಗೆ ಈಗಾಗಲೇ ನೀಡಿರುವ ನಿರ್ದೇಶನಗಳನ್ನು ಚಾಚುತಪ್ಪದೇ ಪಾಲಿಸಬೇಕು.
- ಮೇಲ್ಕಂಡ ಕ್ರಮಗಳನ್ನು ಹಾಲು ವಿತರಣೆ ಮಾಡುವಾಗಲೂ ಅನುಸರಿಸತಕ್ಕದ್ದು.

ಈ ಅಂಶಗಳನ್ನು ಶಾಲೆಯಲ್ಲಿ ಅನುಷ್ಠಾನಗೊಳಿಸಿರುವ ಬಗ್ಗೆ ಶಾಲೆಗೆ ಭೇಟಿ ನೀಡುವ ಎಲ್ಲಾ ಅಧಿಕಾರಿಗಳು, ಗಮನಿಸಿ ಪಾಲನೆಯಲ್ಲಿ ವ್ಯತ್ಯಯಗಳು ಕಂಡುಬಂದಲ್ಲಿ ಸಂಬಂಧಿಸಿದವರ ಮೇಲೆ ಸೂಕ್ತ ಶಿಸ್ತು ಕ್ರಮಕೈಗೊಳ್ಳುವುದು. ಈ ಸೂಚನೆಗಳನ್ನು ಜಿಲ್ಲೆಯಲ್ಲಿ ಅನುಷ್ಠಾನಗೊಳಿಸಲು ಉಪನಿರ್ದೇಶಕರು (ಆಡಳಿತ), ಕ್ಷೇತ್ರಶಿಕ್ಷಣಾಧಿಕಾರಿಗಳು, ಇ.ಸಿ.ಓ ಸಹಾಯಕ ನಿರ್ದೇಶಕರು (ಅಕ್ಷರದಾಸೋಹ) ಇವರಿಗೆ ನೇರ ಹೊಣೆ ಹೊರಿಸಿ ಸೂಚನೆ ನೀಡುತ್ತಾ ಯಾವುದೇ ಉಲ್ಲಂಘನೆ, ವ್ಯತ್ಯಾಸವಾದಲ್ಲಿ ಸದರಿ ಅಧಿಕಾರಿಗಳು ಕರ್ತವ್ಯಲೋಪವೆಂದು ಪರಿಗಣಿಸಿ ನೇರವಾಗಿ ಅವರ ಮೇಲೆ ಸೂಕ್ತ ಶಿಸ್ತುಕ್ರಮಜರುಗಿಸಲಾಗುವುದೆಂದು ಎಚ್ಚರಿಕೆ ನೀಡಿದೆ.

(ದೀಪ ಚೋಳನ್)
ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ

**ಪ್ರತಿಯನ್ನು ಗೌರವಗಳೊಂದಿಗೆ ಮಾನ್ಯ ಜಿಲ್ಲಾಧಿಕಾರಿಗಳು, ಬೆಳಗಾವಿ ಇವರಿಗೆ ಮಾಹಿತಿಗಾಗಿ**

ಪ್ರತಿಯನ್ನು ಮಾಹಿತಿ ಹಾಗೂ ಸೂಕ್ತಕ್ರಮಕ್ಕಾಗಿ.

1) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಳಗಾವಿ ಮತ್ತು ಚಿಕ್ಕೋಡಿ
2) ಶಿಕ್ಷಣಾಧಿಕಾರಿಗಳು, (ಮ.ಉ.ಯೋ) ಉಪನಿರ್ದೇಶಕರ ಕಛೇರಿ ಚಿಕ್ಕೋಡಿ
3) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ
4) ಜಿಲ್ಲೆಯ ಎಲ್ಲಾ ಕ್ಷೇತ್ರಶಿಕ್ಷಣಾಧಿಕಾರಿಗಳು ಸಾ.ಶಿ.ಇಲಾಖೆ, ಇವರು (ಸಂಬಂಧಪಟ್ಟ ಎಲ್ಲಾ ಸಿ.ಆರ್.ಪಿಗಳ ಮುಖಾಂತರ ಎಲ್ಲಾ ಶಾಲೆಗಳ ಮುಖ್ಯಶಿಕ್ಷಕರುಗಳಿಗೆ ಕಡ್ಡಾಯವಾಗಿ ಮೇಲ್ಕಂಡ ಅಂಶಗಳನ್ನು ಪಾಲಿಸಲು ಸುತ್ತೋಲೆ ಹೊರಡಿಸುವುದು)
5) ಜಿಲ್ಲೆಯ ಎಲ್ಲಾ ಸಹಾಯಕ ನಿರ್ದೇಶಕರು (ಮ.ಉ.ಯೋ) ತಾ.ಪಂ

ಮುಖ್ಯಕಾರ್ಯನಿರ್ವಾಹಕ ಅಧಿಕಾರಿಗಳು,
ಜಿಲ್ಲಾ ಪಂಚಾಯತ ಬೆಳಗಾವಿ